# ಹಿರಿಯ ಶ್ರೇಣಿ ದಿವಾಣಿ ನ್ಯಾಯಾಲಯ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ಹೊನ್ನಾವರ

**ಸಿ.ಸಿ. ನಂ. 36/2024**

ಫಿರ್ಯಾದಿ : ಸರಕಾರದ ಪರವಾಗಿ

ಪೊಲೀಸ್ ನಿರೀಕ್ಷಕರು,
ಹೊನ್ನಾವರ ಪೊಲೀಸ್ ಠಾಣೆ (ಉ.ಕ).

**-ವಿರುದ್ಧ-**

ಆರೋಪಿ ಪಿ ಹರದೀಪ ರೆಡ್ಡಿ ತಂದೆ ಪೋ ರೆಡ್ಡಿ ಮಧುಸೂಧನ್,

ವಯಸ್ಸುಃ 24 ವರ್ಷ,
ಉದ್ಯೋಗಃ ಸಿವಿಲ್ ಇಂಜಿನೀಯರ್,
ಸಾಕೀನಃ 1-29-2, ಪೆಂಟಿಕಂಟಿ ನಗರ,
ಆರ್.ಟಿ.ಸಿ. ಬಸ್ ಸ್ಟೇಷನ್, ಬಗಾನಪಲ್ಲೊ ಮಂಡಲ್,
ಜಿಲ್ಲೆಃ ಕರ್ನೂಲ್, ರಾಜ್ಯಃ ಆಂಧ್ರಪ್ರದೇಶ
ಹಾಲಿ ವಾಸಃ 28/1045-ಈ, ಸಾಯಿಬಾಬಾ ನಗರ,
ನಂದ್ಯಾಲ್, ಸನ್ ಲೈಟ್ ಸ್ಕೂಲ್ ಹತ್ತಿರ, ರಾಜ್ಯಃ ಆಂಧ್ರಪ್ರದೇಶ.

## ಅಪರಾಧಿಕ ಪ್ರಕ್ರಿಯಾ ಸಂಹಿತೆಯ ಕಲಂ 313 ಅಡಿಯಲ್ಲಿ ದಾಖಲು ಮಾಡಿಕೊಂಡ ಆರೋಪಿಯ ಹೇಳಿಕೆ

ಪ್ರಶ್ನೆ.1: ನೀವು ಅಭಿಯೋಜಕರ ಪರ ಸಾಕ್ಷಿದಾರರ ಸಾಕ್ಷಿ ಹೇಳಿಕೆಯನ್ನು ಕೇಳಿದ್ದೀರಾ?
ಉತ್ತರಃ

ಪ್ರಶ್ನೆ.2: ಫ್ರಾಸಾ-1 ದಯಾನಂದ ಶಂಕರ ಅಂಬಿಗ ರವರು ತಮ್ಮ ಸಾಕ್ಷ್ಯದಲ್ಲಿ, ದಿಃ 25-11-2023 ರಂದು ಸಂಜೆ 5.00 ಗಂಟೆ ಸುಮಾರಿಗೆ ತನ್ನ ಸ್ನೇಹಿತೆಯಾದ ಮೃತ ತ್ರಿವೇಣಿ ಗಣಪತಿ ಅಂಬಿಗರವರನ್ನು ತನ್ನ ಬೈಕ ಸಂಖ್ಯೆ ಕೆಎ-04-ಜೆಎಕ್ಸ್-4142 ರಲ್ಲಿ ಕೂರಿಸಿಕೊಂಡು ಆಕೆಯನ್ನು ಅವರ ಮನೆಯಾದ ಕರಿಕುರ್ವಾಕ್ಕೆ ಬಿಡಲು ಹೊನ್ನಾವರದಿಂದ ಗೇರುಸೊಪ್ಪ ಮಾರ್ಗವಾಗಿ ಹೋಗುತ್ತಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.3: ಫ್ರಾಸಾ-1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಈ ರೀತಿ ಹೋಗುವಾಗ ಮುಗ್ವಾ ಗ್ರಾಮದ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ರಾಷ್ಟ್ರೀಯ ಹೆದ್ದಾರಿಯಿಂದ ಹೋಗುತ್ತಿದ್ದಾಗ ಎದುರಿನಿಂದ ಒಂದು ಕಾರು ತನ್ನ ಮುಂದಿನಿಂದ ಹೋಗುತ್ತಿದ್ದ ಬೈಕನ್ನು ಓವರ್ ಟೇಕ್ ಮಾಡಲು ರಸ್ತೆಯ ಬಲ ಬದಿಗೆ ತಿರುಗಿ ತಾನು

ಹೋಗುತ್ತಿದ್ದ ಮೋಟಾರ್ ಸೈಕಲ್ ಗೆ ಡಿಕ್ಕಿಪಡಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.4: ಫ್ರಾಸಾ–1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಸದ್ರಿ ಅಪಘಾತದಿಂದ ತಾನು ಮತ್ತು ತ್ರೀವೇಣಿ ಕೆಳಗೆ ಬಿದ್ದು, ಸದ್ರಿ ಅಪಘಾತದಿಂದ ತನ್ನ ಬಲ ಕಾಲಿನಲ್ಲಿ 3 ಕಡೆ ಮೂಳೆ ಮುರಿದು, ತ್ರೀವೇಣಿಯವರ ಮುಖಕ್ಕೆ ತಲೆಗೆ ಗಾಯ ಆಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.5: ಫ್ರಾಸಾ–1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಲ್ಲಿದ್ದವರು ತ್ರೀವೇಣಿಯವರನ್ನು ಯಾವುದೋ ಖಾಸಗಿ ವಾಹನದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ತನ್ನನ್ನು 108 ಅಂಬುಲೆನ್ಸ ಮೂಲಕ ಹೊನ್ನಾವರ ಸರಕಾರಿ ಆಸ್ಪತ್ರೆಗೆ ತಂದಿದ್ದು, ತ್ರೀವೇಣಿಯವರನ್ನು ಹೆಚ್ಚಿನ ಚಿಕಿತ್ಸೆಗೆ ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಮರುದಿನ ಆಕೆ ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.6: ಫ್ರಾಸಾ–1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಅಪಘಾತಪಡಿಸಿದ ಕಾರ ಚಾಲಕನನ್ನು ನೋಡಿದರೆ ಗುರುತಿಸುತ್ತೇನೆ ಎಂಬುದಾಗಿ ಹೇಳಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.7: ಫ್ರಾಸಾ–1 ರವರು ಮುಂದುವರಿದು ತಮ್ಮ ಸಾಕ್ಷ್ಯದಲ್ಲಿ, ಆರೋಪಿತನು ಕಾರನ್ನು ವೇಗವಾಗಿ ಬಲಕ್ಕೆ ತಿರುಗಿಸಿ ನನ್ನ ಎದುರಿನಲ್ಲಿ ಬಂದಿದ್ದರಿಂದ ತನಗೆ ಡಿಕ್ಕಿಪಡಿಸಿದ್ದು, ಆತನ ತಪ್ಪಿಂದ ಅಪಘಾತ ಆಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.8: ಫ್ರಾಸಾ–2 ಮಂಜುನಾಥ ಕೃಷ್ಣ ಗೌಡ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 25–11–2023 ರಂದು ಮಧ್ಯಾಹ್ನ 03–30 ರ ಸಮಯಕ್ಕೆ ತಾನು ಅಂಗಡಿಯಲ್ಲಿದ್ದಾಗ ಕವಲಕ್ಕಿ ಕಡೆಯಿಂದ ಹೊನ್ನಾವರದ ಕಡೆಗೆ ಒಂದು ಕಾರು ಬರುತ್ತಿದ್ದು, ಹೊನ್ನಾವರದಿಂದ ಕವಲಕ್ಕಿ ಕಡೆಗೆ ಒಂದು ಬೈಕು ಹೋಗುತ್ತಿದ್ದು, ಇದ್ದಕ್ಕಿದ್ದ ಹಾಗೆ

ರಾಷ್ಟ್ರೀಯ ಹೆದ್ದಾರಿಯಲ್ಲಿ ಶಬ್ದ ಕೇಳಿದ್ದು, ತಕ್ಷಣ ತಾನು ನೋಡಿದಾಗ ಬೈಕು ಮತ್ತು ಕಾರು ಮುಖಾ ಮುಖಿ ಡಿಕ್ಕಿಯಾಗಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.9: ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಬೈಕಿನಲ್ಲಿ ಎರಡು ಜನ ಇದ್ದು ಅವರು ಕೆಳಗೆ ಬಿದ್ದಿದ್ದರು ಮತ್ತು ಅವರಿಗೆ ಪೆಟ್ಟಗಿದ್ದು ಒಂದು ರಿಕ್ಷಾದಲ್ಲಿ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು, ನಂತರ ಅವರ ಮನೆಯವರು ಅವರನ್ನು ಹೆಚ್ಚಿನ ಚಿಕಿತ್ಸೆಗೆ ಬೇರೆ ಕಡೆಗೆ ಕರೆದುಕೊಂಡು ಹೋಗಿದ್ದು, ನಂತರ ತಾನು ಅಪಘಾತದ ಬಗ್ಗೆ ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.10: ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಮರು ದಿನ ಪೋಲಿಸರು ಅಪಘಾತ ಸ್ಥಳಕ್ಕೆ ಬಂದು ಒಂದು ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿ 7 ಫೋಟೋ ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.11: ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ತನ್ನನ್ನು ಪೋಲೀಸ್ ಠಾಣೆಗೆ ಕರೆಸಿ ಅಪಘಾತಕ್ಕೊಳಗಾದ ಕಾರು ಮತ್ತು ಬೈಕಿನ ಹತ್ತಿರ ತನ್ನನ್ನು ನಿಲ್ಲಿಸಿ 6 ಫೋಟೋಗಳನ್ನು ತೆಗೆಸಿ, ಪಂಚನಾಮೆಗೆ ತನ್ನ ಸಹಿ ತೆಗೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.12: ಫ್ರಾಸಾ-2 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಚಿಕಿತ್ಸೆ ಪಡೆಯುತ್ತಿದ್ದ ವ್ಯಕ್ತಿ ಮೃತಪಟ್ಟಿರುವುದಾಗಿ ಗೊತ್ತಾಗಿದ್ದು, ಈ ಬಗ್ಗೆ ಪುನಃ ಪೋಲೀಸ್ ಠಾಣೆಗೆ ಹೋಗಿ ಮರು ಹೇಳಿಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.13: ಫ್ರಾಸಾ-3 ಈಶ್ವರ ಮಂಜುನಾಥ ಹೆಗಡೆ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 26-11-2023 ರಂದು ಸಂಜೆ 04-30 ರ ಸಮಯದಲ್ಲಿ ಮುಗ್ವಾ ಸುಬ್ರಹ್ಮಣ್ಯ ದೇವಸ್ಥಾನದ ಎದುರಿಗೆ ಇರುವ ರಾಘವೇಂದ್ರ ಭಾರತಿ ಸಂಸ್ಕೃತ ಪಾಠಶಾಲೆಯ ಎದುರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಒಂದು ಕಾರು ಮತ್ತು ಬೈಕಿಗೆ ಅಪಘಾತವಾಗಿದ್ದು

ಅಪಘಾತ ಸ್ಥಳವನ್ನು ಚಾಸಾ-1 ರವರು ತೋರಿಸಿದ್ದು ಸದರಿ ಸ್ಥಳದಲ್ಲಿ ಪೋಲೀಸರು ತನ್ನ ಮತ್ತು ಚಾಸಾ-3 ರವರ ಸಮಕ್ಷಮ ಒಂದು ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿ ಫೋಟೋಗಳನ್ನು ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.14: ಫ್ರಾಸಾ-3 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಸಂಜೆ ವೇಳೆಯಲ್ಲಿ ಪೋಲೀಸರು ತನ್ನನ್ನು ಮತ್ತು ಚಾಸಾ-3 ರವರನ್ನು ಠಾಣೆಗೆ ಕರೆಸಿದ್ದು ಅಲ್ಲಿ ಅಪಘಾತಕ್ಕೊಳಗಾಗಿದ್ದ ಕಾರು ಮತ್ತು ಬೈಕನ್ನು ಚಾಸಾ-1 ರವರು ತೋರಿಸಿದ್ದು ಅವುಗಳ ಮುಂದೆ ತಮ್ಮನ್ನು ನಿಲ್ಲಿಸಿ 6 ಫೋಟೋಗಳನ್ನು ತೆಗೆಸಿ, ವಾಹನಗಳನ್ನು ಅಮಾನತ್ತುಪಡಿಸಿಕೊಂಡು ಪಂಚನಾಮೆ ತಯಾರಿಸಿ ತನ್ನ ಸಹಿ ತೆಗೆದುಕೊಂಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.15: ಫ್ರಾಸಾ-6 ಮುರ್ಡೇಶ್ವರ ವೃತ್ತದ ಪೊಲೀಸ್ ವೃತ್ತ ನಿರೀಕ್ಷಕರಾದ ಸಂತೋಷ ಆನಂದ ಕಾಯ್ಕಿಣಿ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 26-11-2023 ರಂದು ತಾನು ಈ ಕೇಸಿನ ಕಡತವನ್ನು ಚಾಸಾ-15 ರಿಂದ ಪಡೆದುಕೊಂಡು ಅದೇ ದಿನ ಚಿಕಿತ್ಸೆ ಪಡೆಯುತ್ತಿದ್ದ ಗಾಯಾಳು ತ್ರಿವೇಣಿ ಅಂಬಿಗರವರು ಮೃತಪಟ್ಟಿದ್ದು ಈ ಬಗ್ಗೆ ವರದಿ ಪಡೆದುಕೊಂಡು ಈಗಾಗಲೇ ದಾಖಲಾಗಿದ್ದ ಪ್ರಕರಣದಲ್ಲಿ ಕಲಂ 304(ಎ) ಯನ್ನು ಅಳವಡಿಸಿಕೊಳ್ಳಲು ಮಾನ್ಯ ನ್ಯಾಯಾಲಯಕ್ಕೆ ನಿವೇದನೆ ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.16: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ-16 ರವರಿಗೆ ಮೃತಳ ಶವ ತನಿಖಾ ವರದಿಯನ್ನು ತಯಾರಿಸಿಕೊಂಡು ಬರುವಂತೆ ಜ್ಞಾಪನ ನೀಡಿದ್ದು, ಅದರಂತೆ ಅವರು ಶವತನಿಖಾ ವರದಿಯನ್ನು ತಂದು ಹಾಜರುಪಡಿಸಿದ್ದು, ಅದನ್ನು ಕಡತಕ್ಕೆ ಅಳವಡಿಸಿ, ಅದೇ ದಿನ ಚಾಸಾ-1 ರವರ ಮರುಹೇಳಿಕೆ ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.17: ಫ್ರಾಸಾ-6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ನಂತರ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರ ಸಮಕ್ಷಮ ಸ್ಥಳ ಪಂಚನಾಮೆ ಮತ್ತು ಕಚ್ಚಾ ನಕಾಶೆ ತಯಾರಿಸಿ, ಸ್ಥಳದ ಫೋಟೋ ತೆಗೆಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ.18: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಠಾಣಾ ಆವರಣದಲ್ಲಿ ನಿಲ್ಲಿಸಿದ್ದ ಅಪಘಾತಪಡಿಸಿದ ಕಾರನ್ನು ಹಾಗೂ ಅಪಘಾತಕ್ಕೊಳಗಾದ ಬೈಕನ್ನು ಚಾಸಾ–1 ನೋಡಿ ಗುರುತಿಸಿದ್ದು ಪಂಚರ ಸಮಕ್ಷಮ ಫೋಟೋ ತೆಗೆಸಿ ಪಂಚನಾಮೆಯಡಿಯಲ್ಲಿ ಅಮಾನತ್ತುಪಡಿಸಿಕೊಂಡು ಚಾಸಾ–7 ಮತ್ತು 8 ರವರ ಹೇಳಿಕೆ ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.19: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 27–11–2023 ರಂದು ಕಾರಿನ ಮಾಲೀಕರಾದ ಚಾಸಾ–10 ರವರು ಠಾಣೆಗೆ ಹಾಜರಾಗಿದ್ದರಿಂದ ಅವರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಅವರಿಂದ ಉತ್ತರವನ್ನು ಪಡೆದು ನಂತರ ಕಾರಿನ ದಾಖಲಾತಿಗಳನ್ನು ಪರಿಶೀಲಿಸಿ ಇಂಡೆಮ್ನಿಟಿ ಬಾಂಡ್ ಪಡೆದು ಕಾರನ್ನು ಆತನ ಸ್ವಾದೀನಕ್ಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.20: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಆರೋಪಿ ಠಾಣೆಗೆ ಹಾಜರಾಗಿದ್ದು ಆತನನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.21: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ಅದೇ ದಿನ ಚಾಸಾ–13 ಮತ್ತು 14 ರವರಿಂದ ಕಲಂ 65–ಬಿ ಪ್ರಮಾಣಪತ್ರ ಪಡೆದಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ.22: ಫ್ರಾಸಾ–6 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 06–02–2024 ರಂದು ಮೃತಳ ಪಿಎಂ ವರದಿ ಹಾಗೂ ಗಾಯಾಳುವಿನ ಗಾಯದ ಪ್ರಮಾಣಪತ್ರ ಪಡೆದುಕೊಂಡು ದಿನಾಂಕ 08–02–2024 ರಂದು ಈ ಕೇಸಿನ ಕಡತವನ್ನು ಚಾಸಾ–18 ರವರಿಗೆ ವಹಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ23: ಪ್ರಾಸಾ–7 ರೇಲ್ವೇಸ್ ಹುಬ್ಬಳ್ಳಿ ಸಿ ಪಿ ಐ ಆಗಿರುವ ಸುರೇಶ ಗಂಗಪ್ಪ ಕುಂಬಾರ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 08–02–2024 ರಂದು ಕೇಸಿನ ಕಡತವನ್ನು ಚಾಸಾ–17 ರಿಂದ ಪಡೆದುಕೊಂಡು ದಿನಾಂಕ 28–03–2024 ರಂದು ಬೈಕ್ ಮಾಲೀಕರಾದ ಚಾಸಾ–6 ರವರಿಗೆ ಕಲಂ 133 ರಡಿಯಲ್ಲಿ ನೋಟೀಸು ನೀಡಿ ಉತ್ತರ ಪಡೆದುಕೊಂಡು ಅದೇ ದಿನ ಚಾಸಾ–6 ರವರ ಹೇಳಿಕೆ ಪಡೆದು, ಬೈಕಿಗೆ ಸಂಬಂಧಪಟ್ಟ ದಾಖಲೆಗಳನ್ನು ಪಡೆದು ಬೈಕನ್ನು ಅವರ ಮಧ್ಯಂತರ ಸ್ವಾದೀನಕ್ಕೆ ನೀಡಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ24: ಪ್ರಾಸಾ–7 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 10–04–2024 ರಂದು ಐಎಂವಿ ವರದಿಯನ್ನು ಪಡೆದು, ತನಿಖೆ ಪೂರೈಸಿ ಆರೋಪಿ ವಿರುದ್ಧ ದೋಷಾರೋಪಣ ಪಟ್ಟಿ ಸಲ್ಲಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ25: ಪ್ರಾಸಾ–8 ಹೊನ್ನಾವರ ಸಂಚಾರದ ಪಿ.ಎಸ್.ಐ ಆಗಿರುವ ಮಮತಾ ಶಂಕರ ನಾಯ್ಕ ರವರು ತಮ್ಮ ಸಾಕ್ಷ್ಯದಲ್ಲಿ, ದಿನಾಂಕ 25–11–2023 ರಂದು ತಾನು ಠಾಣಾ ಪ್ರಭಾರದಲ್ಲಿದ್ದಾಗ ರಾತ್ರಿ 08–15 ಕ್ಕೆ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದುಕೊಂಡು ಠಾಣಾ ಮೊಕದ್ದಮೆ ನಂ.238/2023 ರಂತೆ ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡು ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ–17 ರವರಿಗೆ ಹಸ್ತಾಂತರಿಸಿರುವುದಾಗಿ ಸಾಕ್ಷಿ ನುಡಿಯುತ್ತಾರೆ. ಇದಕ್ಕೆ ನೀವೇನು ಹೇಳುತ್ತೀರಿ?
ಉತ್ತರಃ

ಪ್ರಶ್ನೆ26: ನೀವು ಹೇಳುವುದಾದರು ಏನು ಇದೆಯೇ?
ಉತ್ತರಃ

ಪ್ರಶ್ನೆ:.27: ನಿಮ್ಮ ಪರವಾಗಿ ಯಾವುದಾದರೂ ಮೌಖಿಕ ಅಥವಾ ದಾಖಲಾತಿ ಸಾಕ್ಷ್ಯ ಇರುತ್ತದೆಯೇ?
**ಉತ್ತರಃ**

(ವಿಹಿತ ಹೇಳಿಕೆಯನ್ನ ಆರೋಪಿತನಿಗೆ ಗೊತ್ತಿರುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಕೇಳಿದ ಪ್ರಶ್ನೆಗಳಿಗೆ ಆರೋಪಿತನು ನೀಡಿರುವ ಉತ್ತರಗಳನ್ನ ನನ್ನ ಸ್ವಹಸ್ತಾಕ್ಷರಗಳಿಂದ ಬರೆದು ಕೊಳ್ಳಲಾಗಿರುತ್ತದೆ.)

ಸಹಿ ಇದೆ.

ದಿನಾಂಕಃ 26-03-2026

**ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೊನ್ನಾವರ.**